ತಾರೀಖು 17ನೆ ಅಕ್ಟೋಬರ್ 1907.

ನಂ. 3303—ಲೋ. ಬೋ. 69-07-2, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಕಂಡ ಗ್ರಾಮಗಳನ್ನು, 1902ನೆ ಇಸವಿಯ 2ನೆ ನಂಬರ್ ಲೋಕಲ್ ಬೋರ್ಡ್ ರೆಗ್ಯುಲೇಷನಿನ ಉದ್ದೇಶಗಳಿಗಾಗಿ, 1907ನೆ ಇಸವಿಯ ನವಂಬರ್ 1ನೆ ತಾರೀಖಿನಿಂದ ಯೂನಿಯರ್ಮಗಳಾಗಿ ಪರ್ಯಾಡಿಸಲಾಗುವುದು ಎಂದು ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇದೆ :—

ಚಿತ್ರದುರ್ಗ ತಾಲ್ಲೂಕು.
1. ಪರ್ವತಸಾಗರ
2. ಚಿಕ್ಕೊಂಡನಹಳ್ಳಿ
3. ಹಿರೆಗುಂಟನೂರು

ಚಳ್ಳಕೆರೆ ತಾಲ್ಲೂಕು.
4. ಪರಶುರಾಮಪುರ
5. ಹಿರೆಹಳ್ಳಿ

ಹೊಸದುರ್ಗ ತಾಲ್ಲೂಕು.
6. ಬಿಳಿಗೂರು

ಹೊಳಲ್ಕೆರೆ ತಾಲ್ಲೂಕು.
7. ನಾಗಸಮುದ್ರ

ಹಿರಿಯೂರು ತಾಲ್ಲೂಕು.
8. ಮುರಡಿಹಳ್ಳಿ

ದಾವಣಗೆರೆ ತಾಲ್ಲೂಕು.
9. ಹದಡಿ
10. ಲೋಕಿಕೆರೆ

ಹೊಳಲ್ಕೆರೆ ತಾಲ್ಲೂಕು.
11. ರಾಮಗಿರಿ
12. ತಾಳ್ಯ
13. ದುಮ್ಮಿ

ಜಗಳೂರು ತಾಲ್ಲೂಕು.
14. ಬಿದರಕೆರೆ, ನಿಬಗೂರು ಸೇರಿ
15. ಅಸಗೋಡು

ಹರಿಹರ ಸಬ್ ತಾಲ್ಲೂಕು.
16. ಬನ್ನಿವಳ್ಳಿ

ಕ್ಯಾಂಪು ಮೈಸೂರು, ತಾರೀಖು 19ನೆ ಅಕ್ಟೋಬರು 1907.

ನಂ. ಸಿ. 59, ಅರಸೀಕೆರೆ ತಾಲ್ಲೂಕಿನ ಅಮಲ್ದಾರ್ ಮಿ॥ ಕೆ. ಶ್ರೀನಿವಾಸರಾಯರು ಬಂದು ತಿಂಗಳ ಪ್ರಿವಿಲೇಜ್ ರಜಾ ಮೇರೆಗೆ ಇರುವ ಕಾಲದಲ್ಲಿ ಸದರಿ ತಾಲ್ಲೂಕಿನ ಚಾರ್ಜಿನಲ್ಲಿರುವಂತೆ ನೇಮಿಸಲ್ಪಟ್ಟ ಮಿ॥ ಜಿ. ಎಸ್. ರಾಮಸ್ವಾಮೈಯ್ಯಂಗಾರ್ರಿಗೆ, ಇವರು ಸದರಿ ತಾಲ್ಲೂಕಿನ ಚಾರ್ಜಿನಲ್ಲಿ ಇರುವ ಪರ್ಯಂತ, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೆ ಪ್ರಕರಣದ ಮೇರೆ, ಮೂರನೆ ತರಗತಿಯ ಮಾಜಿಸ್ಟ್ರೇಟ್ ಅಧಿಕಾರಗಳನ್ನು ಕೊಟ್ಟಿದೆ.

ತಾರೀಖು 20ನೆ ಅಕ್ಟೋಬರ್ 1907.

ನಂ. ಸಿ. 67, ತುಮಕೂರು ಡಿಸ್ಟ್ರಿಕ್ಟಿನ ಪೋಲೀಸು ಸೂಪರ್‌ಟೆಂಡೆಂಡ್ ಮಿ॥ ವೈ. ವಿ. ಕೃಷ್ಣಮೂರ್ತಿ, ಬಿ.ಏ., ಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 177ನೆ ನಿಬಂಧನೆಯ ಮೇರೆಗೆ, 1907ನೆ ಇಸವಿಯ ಅಕ್ಟೋಬರು 25ನೆ ತಾರೀಖಿನಿಂದ ಎರಡು ತಿಂಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 20ನೆ ಅಕ್ಟೋಬರ್ 1907.

ನಂ. ಸಿ. 71, ಬೆಂಗಳೂರು ಡಿಸ್ಟ್ರಿಕ್ಟಿನ ಪೋಲೀಸು ಸೂಪರ್‌ಟೆಂಡೆಂಟ್ ಮಿ॥ ಎಲ್. ಕೃಷ್ಣರಾಯರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 177ನೆ ನಿಬಂಧನೆಯ ಮೇರೆಗೆ, 1907ನೆ ಇಸವಿಯ ಅಕ್ಟೋಬರು 25ನೆ ತಾರೀಖಿನಿಂದ ಒಂದು ತಿಂಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ.

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇನ್ಸ್ಟ್ರುಮೆಂಟ್.

ತಾರೀಖು 21ನೆ ಅಕ್ಟೋಬರ್ 1907.

ನಂ. 1018—7419, ಕೋಲಾರ ಡಿವೀಜನಿಗೆ ಸೇರಿದ ಸಬ್ ಅಸಿಸ್ಟೆಂಟ್ ಇಂಜನೀಯರ್ ಮಿ॥ ಏ. ಟಂಡಿಯೋನಿರಾವ್, ಎಲ್. ಸಿ. ಇ. ಯವರಿಗೆ ಸ॥ 1907ನೆ ಅಕ್ಟೋಬರ್ 25ನೆ ತಾರೀಖಿನಾರಭ್ಯ 10 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ಎಂ. ಸಿಂಗಾರವೇಲು,
ಫಾರ್ ಮೈಸೂರು ಗವರ್ನ್‌ಮೆಂಟು ಪಬ್ಲಿಕ್ ವರ್ಕ್ಸ್ ಇಲಾಖಾ ಸೆಕ್ರೆಟರಿ.